## ಕವಿತೆ




**ಅಕ್ಷತಾ ಕೃಷ್ಣಮೂರ್ತಿ**

ಕಲೆ: ಎಸ್.ವಿ. ಹೂಗಾರ್




# ಸಮುದ್ರ ಬಿಡುವುದು ಎಂದರೆ

ದಂಡೆಯಲಿ
ಹೆಜ್ಜೆಯನ್ನು ಗುರುತಾಗಿಸಿದ
ರೇವೆಯ ಮರೆಯುವುದು

ಹೇಳಬೇಕಾದ ಮಾತು
ಹೇಳಲಾಗದೆ ಬಂದ
ಲೆಕ್ಕವಿಲ್ಲದ
ಬೆಚ್ಚಗಿನ ಬೇಚೈನು

ಊರ ನಡುವಿನ ಹಿರಿಯಾಲದ
ತುದಿಯ ಎಲೆ ಮೇಲೆ
ಕುಳಿತ ಟಿಟ್ಟುಗ
ಹಕ್ಕಿಯ ಕಣ್ಣು
ಊರ ಹೊರಗಾದವರ
ಲೆಕ್ಕವಿಟ್ಟಂತೆ
ಉಪ್ಪು ನೀರು
ಮೀನ ಕಮಟು
ವಾಸನೆಯಿಂದೋಡುವ
ಖೋ ಕೊಡಲಾಗದ ತಹತಹ

ಬಲೀಂದ್ರ ಬೋರಜ್ಜಿ
ಬುಡ್ಡಕ್ಕನ ದೇಪಳಗಿ
ಬ್ಯಾಲಿಯ ಮೇಲೆಲ್ಲಾ
ನಕ್ಷತ್ರಗೂಡು
ಮರಿಏಡಿಗಳದ್ದು
ಮರೆತರೂ ಕಣ್ಣಲ್ಲೆ
ಉಳಿವ ಕನಸಿನಂತೆ

ಲಕ್ಷ್ಮಿ ಪೂಜೆ ಹೆಸರಲ್ಲಿ
ಊರ ಮನೆಗಳೆಲ್ಲ
ಒಂದೇ ಬೀಡಾಗಿ ಹಾಡಾಗಿ
ಉಂಡು
ಅಲೆಗಳ ಹೊಯ್ದಾಟ
ಕಿವಿ ಹತ್ತಿರ ಬಂದು
ರಿಂಗಣಿಸುವಾಗ
ಸಮುದ್ರ ಬಿಡುವುದು ಎಂದರೆ
ದಂಡೆ ಮೇಲೆರಿ
ತಲೆ ಕೊಯ್ದು ಕೊಂಡು
ಒಣಮೀನಾಗುವುದು
ಅಥವಾ
ಹರಿಯುವ ನದಿ
ತನ್ನ ತಾ ಕತ್ತರಿಸಿಕೊಂಡು
ಸಾಫಾಗಿ ಒಣಗುವುದು

